


ಗೆಳೆಯ: ನನಗೆ ಈಜು ಕಲಿಯಬೇಕೆಂದು ತುಂಬಾ ಆಸೆಯಾಗುತ್ತಿದೆ. ಆದರೆ ಕೆಲಸದ ಒತ್ತಡದಿಂದ ಕಲಿಯಲು ಸಾಧ್ಯವಾಗುತ್ತಿಲ್ಲ. ಏನು ಮಾಡುವುದು?

ಗುಂಡ: ಅದಕ್ಯಾಕೆ ಚಿಂತೆ ಮಾಡುತ್ತೀಯಾ? ಅಂಚೆ ಮೂಲಕ ಕಲಿತರೆ ಆಯಿತು ಬಿಡು.

★★★

ವಾದ ಪ್ರತಿವಾದಗಳು ಪರಾಕಾಷ್ಠೆಯ ಹಂತ ತಲುಪುತ್ತಿದ್ದಂತೆಯೇ ಒಬ್ಬ ವಕೀಲರು ಇನ್ನೊಬ್ಬ ವಕೀಲರಿಗೆ 'ನೀನೊಬ್ಬ ಕತ್ತೆ' ಎಂದರು. ಆ ವಕೀಲರೂ 'ಕತ್ತೆ ನಾನಲ್ಲ ನೀನು' ಎಂದು ದಬಾಯಿಸುತ್ತಿದ್ದಂತೆಯೇ ಮಧ್ಯೆ ಬಾಯಿ ಹಾಕಿದ ನ್ಯಾಯಾಧೀಶರು ಹೀಗೆಂದರು. 'ನಾನೊಬ್ಬ ಇಲ್ಲಿದ್ದೇನೆಂಬುದನ್ನು ನೀವಿಬ್ಬರೂ ಮರೆತ ಹಾಗಿದೆ'.

★★★

ವೈದ್ಯ: ನಿಮಗೆ ಇಷ್ಟೊಂದು ಕಫ ಕಟ್ಟಿದೆಯಲ್ಲ! ಹೀಗಾದರೆ ಹೇಗೆ? ನೀವೇನು ಕುಡಿಯುತ್ತೀರಿ ಕಾಫಿನೋ, ಚಹಾನೋ?

ರೋಗಿ: ಡಾಕ್ಟ್ರೇ ನೀವು ನನಗೆ ಸುಮ್ಮನೆ ಒಲವಂತ ಮಾಡಬೇಡಿ. ನಾನು ಮನೆಯಿಂದ ಬರುವಾಗ ತಿಂಡಿ, ಕಾಫಿ ಎಲ್ಲಾ ಮುಗಿಸಿಕೊಂಡೇ ಬಂದಿದೀನಿ.

★★★

ಟೀಚರ್: ನೀನು ನಿನ್ನ ತಂದೆಯ ಹಾಗೆ ಎಂಜಿನಿಯರ್ ಆಗ್ತೀಯೋ ಅಥವಾ ತಾಯಿಯ ಹಾಗೆ ಡಾಕ್ಟರ್ ಆಗ್ತೀಯೋ?

ಗುಂಡ: ನಾನು ತಾತನ ಹಾಗೆ ಆಗ್ತೀನಿ ಟೀಚರ್.

ಟೀಚರ್: ಯಾಕೋ?

ಗುಂಡ: ರಿಟೈರಾಗಿ ಆರಾಮವಾಗಿ ಇರಬಹುದು ಅದಕ್ಕೆ.

★★★

ಪ್ರಿನ್ಸಿಪಾಲ್: ನಿನ್ನ ಹಾಜರಾತಿ ತುಂಬಾ ಕಡಿಮೆ ಇರುವುದರಿಂದ ಈ ಬಾರಿ ಪರೀಕ್ಷೆಗೆ ಕುಳಿತು ಕೊಳ್ಳಲು ನಿನಗೆ ಅವಕಾಶ ನೀಡಲು ಸಾಧ್ಯವಿಲ್ಲ.

ವಿದ್ಯಾರ್ಥಿ: ಸಾರ್ ದಯವಿಟ್ಟು ಹಾಗೆ ಮಾಡಬೇಡಿ! ಇದೊಂದು ಭಾರಿ ಅವಕಾಶ ಕೊಡಿ. ನಿಂತು ಕೊಂಡಾದ್ರೂ ಬರೀತೇನೆ.

★★★

ಪ್ರಯಾಣಿಕರಿಂದ ತುಂಬಿ ತುಳುಕಾಡುತ್ತಿರುವ ಬಸ್ಸೊಂದು ಅತೀ ವೇಗದಿಂದ ಕಡಿದಾದ ರಸ್ತೆಯಲ್ಲಿ ಸಾಗುತ್ತಿತ್ತು. ರಸ್ತೆಯ ಎರಡೂ ಬದಿಯಲ್ಲಿ ಆಳವಾದ ಪ್ರಪಾತ. ಇಷ್ಟಾದರೂ ಆ ಬಸ್ಸಿನ ಚಾಲಕ ಮಾತ್ರ ನಗು ನಗುತ್ತಾ ಬಸ್ಸನ್ನು ಓಡಿಸುತ್ತಿದ್ದ. ಇದನ್ನು ಗಮನಿಸಿದ ಪ್ರಯಾಣಿಕನೊಬ್ಬ ಅವನನ್ನು ಕುರಿತು 'ನೀವು ಯಾಕೆ ಹೀಗೆ ನಗ್ತಾ ಬಸ್ಸನ್ನು ಚಲಾಯಿಸುತ್ತಿದ್ದೀರಾ?' ಎಂದು ಕೇಳಿದ.

ಅದಕ್ಕೆ ಅವನು ಬಸ್ಸಿನ ವೇಗವನ್ನು ಇನ್ನೂ ಹೆಚ್ಚಿಸುತ್ತ 'ಏನಿಲ್ಲ, ಹುಚ್ಚಾಸ್ಪತ್ರೆಯಲ್ಲಿ ಈಗ ನನ್ನನ್ನು ಹುಡುಕುತ್ತಿರುವ ಡಾಕ್ಟರುಗಳ ನೆನಪಾಯಿತು ಅದಕ್ಕೆ' ಎಂದ.

★★★

'ಹತ್ತು ವರ್ಷಗಳ ಹಿಂದೆ ತಾವು ಕಳುಹಿಸಿದ 'ನನ್ನ ಆತ್ಮ ಕಥೆ' ಎಂಬ ಬರಹ ತಡವಾಗಿ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗಲಿದೆ. ಇದಕ್ಕೆ ಆಕ್ಷೇಪಗಳೇನಾದರೂ ಇದ್ದಲ್ಲಿ ದಯಮಾಡಿ ತಿಳಿಸಿ' ಎಂಬ ಪತ್ರವೊಂದು ಸಂಪಾದಕರಿಂದ ಗುಂಡನಿಗೆ ಬಂದಿತು.

ಅದಕ್ಕೆ ಗುಂಡ ಹೀಗೆ ಉತ್ತರ ಬರೆದ– 'ಆಕ್ಷೇಪ ಏನಿಲ್ಲ. ಕಥೆಯನ್ನು ಪ್ರಕಟಿಸಿ. ಆದರೆ ಅದರಲ್ಲಿ ನನಗೆ ಒಂದು ಮಗು ಎಂದಿರುವ ಕಡೆ ಐದು ಎಂದು ತಿದ್ದುಪಡಿ ಮಾಡಿ'.

★★★

ಕೆಲಸಗಾರ: ಸ್ವಾಮಿ ನಾನು ನಿಮ್ಮ ಬಳಿ 30 ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದೇನೆ. ಒಮ್ಮೆಯೂ ಸಂಬಳ ಹೆಚ್ಚಿಗೆ ಮಾಡಿ ಅಂತ ಕೇಳಿಲ್ಲ.

ಯಜಮಾನ: ಅದರಿಂದಾನೇ ನೀನು ನನ್ನ ಬಳಿ ಇಷ್ಟು ವರ್ಷಗಳಿಂದ ಕೆಲಸ ಮಾಡಿಕೊಂಡು ಬರಲು ಸಾಧ್ಯವಾಗಿರೋದು.

★★★

ಟೀಚರ್: ನೀವು ನಿಮ್ಮ ಮಗಳಿಗೆ ಒಂದು ಎನ್‌ಸೈಕ್ಲೋಪೀಡಿಯಾ ತೆಗೆಸಿಕೊಡಬೇಕು.

ಗುಂಡ: ಇಲ್ಲ ಮೇಡಂ ನಾನು ತೆಗೆಸಿ ಕೊಡೋಲ್ಲ. ಅವಳು ನನ್ನಂತೆಯೇ ಸ್ಕೂಲಿಗೆ ನಡೆದುಕೊಂಡೇ ಹೋಗಿ ಬರಲಿ.

**ಸಂಗ್ರಹ: ಎಂ.ಕೆ.ಮಂಜುನಾಥ್, ಬೆಂಗಳೂರು**

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460